CPMG/KA/BG-GPO/13/2003-05

ವಿಶ್ವಮಾನವ ವರ್ಷ

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - I	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೨೨, ೨೦೦೪ (ಭಾದ್ರಪದ ೩೧, ಶಕ ವರ್ಷ ೧೯೨೬)	ನಂ. ೧೦೩೯

ನಗರಾಭಿವೃದ್ಧಿ ಸಚಿವಾಲಯ

ವಿಷಯ: ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶದ (BIAPA) ಸ್ಥೂಲಾಭಿವೃದ್ಧಿ ಯೋಜನೆ ನಕ್ಷೆ ಮತ್ತು ವರದಿಗೆ ತಾತ್ಕಲಿಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಅಧಿಸೂಚನೆ ಸಂ:ವನಇ 142 ಎಂಎನ್ಎಕ್ಸ್ 95 ಬೆಂಗಳೂರು ದಿ:12.1.1996 ಮತ್ತು 14.5.1997

2. ಮಹಾನಗರ ಆಯುಕ್ತರು, ಬಿಎಂಆರ್ಡಿಎ ಪತ್ರ ಸಂ:ಬಿಎಂಆರ್ಡಿಎ:ಓಡಿಪಿ:ಬಿಐಎಪಿಎ:87:2001.02 ದಿ:26.7.2002 ಮತ್ತು 01.02.2003 ಮತ್ತು ಸಂಖ್ಯೆ:ಬಿಎಂಆರ್ಡಿಎ:ಓಡಿಪಿ:01:2001.02 ದಿ:11.12.2003.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಅಧಿಸೂಚನೆಯಲ್ಲಿ ಬಿ.ಎಂ.ಆರ್.ಡಿ.ಎ. ವ್ಯಾಪ್ತಿಯಲ್ಲಿ ಬರುವ ಬಿ.ಐ.ಎ.ಪಿ.ಎ. ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಿ 12.1.1996 ರಿಂದ ಜಾರಿಗೆ ಬರುವಂತೆ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿ.ಎಂ.ಆರ್.ಡಿ.ಎ. ಇವರು ಬಿ.ಐ.ಎ.ಪಿ.ಎ. ಸ್ಥಳೀಯ ಯೋಜನಾ ಪ್ರದೇಶಕ್ಕೆ ಸಿದ್ದಪಡಿಸಿರುವ ಸ್ಥೂಲಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸ್ಥೂಲಾಭಿವೃದ್ಧಿ ಯೋಜನೆಯನ್ನು 2021ನೇ ಇಸವಿಗೆ ತಯಾರಿಸಿದ್ದು, ಈ ಅವಧಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಒಟ್ಟು ಜನಸಂಖ್ಯೆ 10 ಲಕ್ಷ ಎಂದು ಅಂದಾಜಿಸಲಾಗಿದೆ. ಯೋಜನೆಯಲ್ಲಿ ನಗರೀಕರಣ ಎಲ್ಲೆಗೆ ಒಟ್ಟು 12636.81 ಹೆಕ್ಟೇರ್ ಪ್ರದೇಶ ಬೇಕಾಗಬಹುದೆಂದು ಅಂದಾಜಿಸಲಾಗಿದ್ದು, ಇದರಲ್ಲಿ ಶೇಕಡ 46.54 ರಷ್ಟು ಪ್ರದೇಶವನ್ನು ವಸತಿಗೂ, ಶೇಕಡ 3.82 ರಷ್ಟು ಪ್ರದೇಶವನ್ನು ವಾಣಿಜ್ಯಕ್ಕೂ, ಶೇಕಡ 3.54 ರಷ್ಟು ಪ್ರದೇಶವನ್ನು ಕೈಗಾರಿಕೆಗೂ, ಶೇಕಡ 6.16 ರಷ್ಟು ಪ್ರದೇಶವನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉಪಯೋಗಕ್ಕೂ, ಶೇಕಡ 13.84 ರಷ್ಟು ಪ್ರದೇಶವನ್ನು ಉದ್ಯಾನವನ ಮತ್ತು ಬಯಲು ಜಾಗಕ್ಕೆ ಕಾಯ್ದಿರಿಸಲಾಗಿದೆ. ಸ್ಥೂಲಾಭಿವೃದ್ಧಿ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಬೇಕಾಗುವ ವಲಯ ನಿಯಮಾವಳಿಯನ್ನು ಸಿದ್ದಪಡಿಸಿದ್ದು ಸದರಿ ನಕ್ಷೆ ಮತ್ತು ವರದಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 13(1)ರನ್ವಯ ತಾತ್ಕಾಲಿಕ ಅನುಮೋದನೆ ನೀಡುವ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ನಲಇ 248 ಬೆಂರೂಪ್ರಾ 2003, ಬೆಂಗಳೂರು ದಿನಾಂಕ:13.9.2004

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ (ಬಿ.ಎಂ.ಆರ್.ಡಿ.ಎ.) ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶ (ಬಿ.ಐ.ಎ.ಪಿ.ಎ.)ದ ಸ್ಥೂಲಾಭಿವೃದ್ಧಿ ಯೋಜನೆಗೆ ಕೆ.ಟಿ.ಸಿ.ಪಿ. ಕಾಯ್ದೆ ಕಲಂ 13(1) ರನ್ವಯ ಸರ್ಕಾರವು ಈ ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು, ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

1) ಸ್ಥೂಲಾಭಿವೃದ್ಧಿ ಯೋಜನೆಯನ್ನು ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸುವ ಪೂರ್ವದಲ್ಲಿ ಯೋಜನೆಯ ವರದಿಯ ವಲಯ ನಿಯಮಾವಳಿಯಲ್ಲಿ ಕೆಳಕಂಡ ತಿದ್ದುಪಡಿ ಆಳವಡಿಸಿಕೊಳ್ಳುವುದು.

a) **Security Deposit:**
After forfeiture clause, the following shall be added.
" The authority will take action for removal of the deviation as per law.

b) **Mezzanine Floor;**
The definition of Mezzanine floor will be replaced as follows;

" Mezzanine floor means an intermediate floor between ground floor and first floor only. The area of mezzanine floor should not exceed 1/3 of covered area of ground floor".

c) The uses permitted in the agriculture zone to be only those permitted in Zoning Regulations of Bangalore Metropolitan Planning Area (BDA).

d) **Public and Semi-public use:**

In the permissible uses in the Public and Semi-Public Use zone the words 'Restaurant' shall be deleted and in the same zone under **Uses permissible under special circumstance,** the provision of private offices, hardware and software units shall be deleted.

2) ಸ್ಥಳಾಭಿವೃದ್ಧಿ ಯೋಜನೆ ವರದಿಯಲ್ಲಿ "Solar water heater requirement', Safety Measures against Earthquake in building construction". "Rain water harvesting", Facilities for Physically handicapped persons ಹಾಗೂ ಸರ್ಕಾರದ ಪತ್ರ ಸಂಖ್ಯೆ:ನಅಇ 39 ಬೆಂರೂಪ್ರಾ 2002 ಬೆಂಗಳೂರು, ದಿ:16.7.2004ರಲ್ಲಿ ತಿಳಿಸಿರುವಂತೆ "Exemption for open space and civic amenities in sub-division of land" ವಿವರಗಳನ್ನು ಅಳವಡಿಸತಕ್ಕದ್ದು.

3) The uses permissible under special circumstances in residential zone "hardware and software offices" shall be deleted;

4) All the authorized change of land use, conversion of agriculture for non-agricultural purposes and development authorized by competent authorities should be protected. Particularly the apparel park being taken by KIADB in Doddaballapur.

ಬೆಂಗಳೂರು ಅಂತ ರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶದ ಸ್ಥಳಾಭಿವೃದ್ಧಿ ಯೋಜನೆಗೆ ತಾತ್ಕಾಲಿಕ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ಎಲ್ಲಾ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಿ ಸಹಿ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಶ್ರೀಧರಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.

CPMG/KA/BG-GPO/13/2003-05

ವಿಶ್ವಮಾನವ ವರ್ಷ

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - IVA	ಬೆಂಗಳೂರು, ಬುಧವಾರ, ಸೆಪ್ಟೆಂಬರ್ ೨೨, ೨೦೦೪ (ಭಾದ್ರಪದ ೩೧, ಶಕ ವರ್ಷ ೧೯೨೬)	ನಂ. ೧೦೪೦

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂ:ನಅಇ 248 ಬೆಂರೂಪ್ರಾ 2003, ಬೆಂಗಳೂರು, ದಿನಾಂಕ:17ನೇ ಸೆಪ್ಟೆಂಬರ್ 2004

ದಿನಾಂಕ:13.9.2004ರ ಸರ್ಕಾರಿ ಆದೇಶ ಸಂ.ನಅಇ 248 ಬೆಂರೂಪ್ರಾ 2003ರ ನಿಬಂಧನೆಯ ಕಂಡಿಕೆ-4ರ ಬದಲಿಗೆ ಈ ಕೆಳಕಂಡ ನಿಬಂಧನೆಯನ್ನು ಓದಿಕೊಳ್ಳತಕ್ಕದ್ದು.

4. All the authorized change of land use, conversion of agricultural for non-agricultural purpose and development authorized by competent authorities as on the date of issue of this Government Order. This will include apparel park in Doddaballapur, which has already been established by the K.I.A.D.B. will be protected.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿ. ಶ್ರೀಧರಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.

KA / BG - GPO/ 2515 /WPP-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – I | ಬೆಂಗಳೂರು, ಮಂಗಳವಾರ, ಜನವರಿ ೨೭, ೨೦೦೯ (ಮಾಘ ೭, ಶಕ ವರ್ಷ ೧೯೩೦) | ನಂ. ೪೬

ಕರ್ನಾಟಕ ಸರ್ಕಾರದ ನಡವಳಿಗಳು

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ಮಹಾಯೋಜನೆ 2021ನ್ನು (Master Plan) ಅಂತಿಮಗೊಳಿಸಿ ಆದೇಶಿಸುವ ಬಗ್ಗೆ (BIAAPA)

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ UDD 248 ಬೆಂರೂಪ್ರಾ 2003 ದಿ. 13.09.2004, ತಿದ್ದುಪಡಿ ಆದೇಶ ದಿನಾಂಕ: 17.09.2004.
2. ಅಧಿಸೂಚನೆ ಸಂಖ್ಯೆ: ನಅಇ 248 ಬೆಂರೂಪ್ರಾ 2003 ದಿ: 17.11.2004.
3. ಮಹಾನಗರ ಆಯುಕ್ತರು, BMRDA ಮತ್ತು ಅಧ್ಯಕ್ಷರು, BIAAPA ಇವರಿಂದ ಸ್ವೀಕರಿಸಿರುವ ಪತ್ರದ ಸಂಖ್ಯೆ: BIAAPA/ODP/87/2003–04 ದಿನಾಂಕ: 18.01.2006 ಮತ್ತು ದಿನಾಂಕ: 30.12.2006.
4. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರ ಪತ್ರದ ಸಂಖ್ಯೆ: BMRDA/BIAAPA/ Master Plan/2006–07 ದಿನಾಂಕ: 10.03.2008.
5. ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರ ಪತ್ರದ ಸಂಖ್ಯೆ: BMRDA/BIAAPA/ Master Plan/2005–06 ದಿನಾಂಕ: 15/16–01–2009.
6. ಸರ್ಕಾರಿ ಪತ್ರ ಸಂಖ್ಯೆ: ನಅಇ 157 ಬಿಎಂಆರ್ 2005 ದಿನಾಂಕ: 22.06.2006, 25.05.2007, 09.04.2008, 11.11.2008 ಮತ್ತು 07.01.2009.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 13.09.2004ರ ತಿದ್ದುಪಡಿ ಆದೇಶ ದಿನಾಂಕ: 17.09.2004ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಸೆಕ್ಷನ್ 13(1)ರನ್ವಯ ಸರ್ಕಾರವು, ಬೆಂಗಳೂರು ಅಂತಾರಾಷ್ಟ್ರೀಯ

ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ತಾತ್ಕಾಲಿಕ ಮಹಾಯೋಜನೆಗೆ ಅನುಮೋದನೆಯನ್ನು ನೀಡಿ, ಸ್ಥೂಲಾಭಿವೃದ್ಧಿ ಯೋಜನೆಯನ್ನು (ODP) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ 1961ರ ಸೆಕ್ಷನ್ 13(1)ರನ್ವಯ ಮಾಹಿತಿಗೋಸ್ಕರ ಪ್ರಕಟಿಸಿ, ಸಾರ್ವಜನಿಕರಿಂದ ಅಭಿಪ್ರಾಯ ಮತ್ತು ಸಲಹೆಗಳನ್ನು 30 ದಿನಗಳೊಳಗಾಗಿ ಸಲ್ಲಿಸಲು ಕೋರಲಾಗಿತ್ತು. ನಂತರ ಉಲ್ಲೇಖ(2)ರ ಅಧಿಸೂಚನೆ ದಿನಾಂಕ: 17.11.2004ರಲ್ಲಿ ಸರ್ಕಾರವು ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸುವ ದಿನಾಂಕವನ್ನು 31.12.2004ರವರೆಗೂ ವಿಸ್ತರಿಸಿ ಆದೇಶಿಸಿತ್ತು.

ಮೇಲೆ (3)ರಲ್ಲಿ ಓದಲಾದ ದಿನಾಂಕ: 18.01.2006ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಮತ್ತು ಅಧ್ಯಕ್ಷರು ಬಿಐಎಎಪಿಎ ಇವರು ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶದನ್ವಯ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ತಾತ್ಕಾಲಿಕ ಮಹಾಯೋಜನೆಯನ್ನು ದಿನಾಂಕ: 22.09.2004 ರಾಜ್ಯಪತ್ರದಲ್ಲಿ ಪ್ರಕಟಿಸಿ, ಸಾರ್ವಜನಿಕರಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸ್ವೀಕರಿಸಲಾಗಿತ್ತೆಂದು, ಸದರಿ ಸ್ಥೂಲಾಭಿವೃದ್ಧಿ ಯೋಜನಾ ಬಗ್ಗೆ ಒಟ್ಟು 1816 ಆಕ್ಷೇಪಣೆಗಳು ಸ್ಥೂಲಾಭಿವೃದ್ಧಿ ಯೋಜನೆಯ ಬಗ್ಗೆ (ಈಗ ಮಹಾಯೋಜನೆ ಎಂದು ಕರೆಯಲಾಗುತ್ತದೆ) ಸ್ವೀಕರಿಸಿದ್ದು, ಸ್ವೀಕರಿಸಿರುವ ಆಕ್ಷೇಪಣೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿತ್ತು :-

(1) ಸ್ಥೂಲಾಭಿವೃದ್ಧಿ ಯೋಜನೆಯನ್ನು ತಾತ್ಕಾಲಿಕವಾಗಿ ಅನುಮೋದನೆ ನೀಡುವ ಮೊದಲು ಕೃಷಿಯೇತರ ಉದ್ದೇಶಕ್ಕಾಗಿ ಭೂಮಿಯನ್ನು ಪರಿವರ್ತಿಸಿರುವ ಅಥವಾ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಅಥವಾ ನಿರಾಕ್ಷೇಪಣಾ ಪತ್ರ ಹೊರಡಿಸಿರುವ ಪ್ರಕರಣಗಳು (ಒಟ್ಟು 125 ಪ್ರಕರಣಗಳು).

(2) ಕೃಷಿಯೇತರ ಉದ್ದೇಶಕ್ಕಾಗಿ ಭೂಮಿ ಪರಿವರ್ತನೆಗೊಂಡಿಲ್ಲದಿರುವ ಪ್ರಕರಣಗಳು (ಒಟ್ಟು 1647 ಪ್ರಕರಣಗಳು).

(3) ಸ್ಥೂಲಾಭಿವೃದ್ಧಿ ಯೋಜನೆ ತಾತ್ಕಾಲಿಕ ಅನುಮೋದಿತವಾದ ನಂತರ ಮೊದಲು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಪ್ರಕರಣಗಳು (ಒಟ್ಟು 44 ಪ್ರಕರಣಗಳು).

ಮುಂದುವರಿದು, ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಇವರು ಸ್ಥೂಲಾಭಿವೃದ್ಧಿ ಯೋಜನೆಯ ಬಗ್ಗೆ ಸ್ವೀಕರಿಸಿರುವ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಎಲ್ಲಾ ಬದಲಾವಣೆಗಳನ್ನು ಮಹಾಯೋಜನೆಯಲ್ಲಿ ಸೇರಿಸಿದೆ ಎಂದು ವರದಿ ಮಾಡಿ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ದಿನಾಂಕ: 10.03.2008ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಹಾಗೂ ಅಧ್ಯಕ್ಷರು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ಇವರು ಸರ್ಕಾರ ವಿವಿಧ ಪ್ರಾಧಿಕಾರಗಳಾದ BIAL, KIADB, KRDCL ಈ ಸಂಸ್ಥೆಗಳ ಬೇಡಿಕೆಗಳನ್ನು ಪರಿಶೀಲಿಸಿ ಆ ಪ್ರದೇಶಕ್ಕೆ ಬೇಕಾಗಿರುವ ಪ್ರಸ್ತಾವನೆಗಳನ್ನು ಮಹಾಯೋಜನೆಯಲ್ಲಿ ಅಳವಡಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ: 15/16-01-2009ರ ಪತ್ರದಲ್ಲಿ ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಹಾಗೂ ಅಧ್ಯಕ್ಷರು, ಬಿಐಎಎಪಿಎ, ಇವರು ಅಂತಿಮ ಮಹಾಯೋಜನೆಯಲ್ಲಿ ದಿನಾಂಕ: 17.09.2004ರ ಮುನ್ನ ಅನ್ಯಕ್ರಾಂತ ಆಗಿರುವ ಒಟ್ಟು 1565 ಹೆಕ್ಟೇರ್ (3867 ಎಕರೆ) ಪ್ರದೇಶವನ್ನು ನಕ್ಷೆಯಲ್ಲಿ ಗುರುತಿಸಿ, ಸದರಿ ಪ್ರದೇಶವನ್ನು ಸಂರಕ್ಷಿಸಲಾಗಿದೆಯೆಂದು ಹಾಗೂ KIADBಯ ಒಟ್ಟು 1706.84 ಹೆಕ್ಟೇರ್ (4217 ಎಕರೆ) ಪ್ರದೇಶವನ್ನು ಸೇರಿಸಿ ಒಟ್ಟು 14,627.63 ಹೆಕ್ಟೇರ್ ಪ್ರದೇಶಕ್ಕೆ ಮಹಾಯೋಜನೆಯನ್ನು ಸೀಮಿತಗೊಳಿಸಲಾಗಿದೆ ಎಂದು, ಜೊತೆಗೆ ಮಹಾಯೋಜನೆಯಲ್ಲಿ

ಪ್ರಸ್ತಾವಿತ STRR, IRR, TRR, RR ಮತ್ತು Expressway ರಸ್ತೆಗಳನ್ನು ಸಹ ಅಳವಡಿಸಲಾಗಿದೆ ಎಂದು ವರದಿ ಮಾಡಿ BIAAPA ಮಹಾಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆ ನೀಡಲು ಸರ್ಕಾರವನ್ನು ಕೋರಿರುತ್ತಾರೆ.

ಮೇಲೆ (6)ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಪ್ರಸ್ತಾಪಿತ ಮಹಾಯೋಜನೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸರ್ಕಾರದಿಂದ ಸಲಹೆ / ಸೂಚನೆ ನೀಡಲಾಗಿರುತ್ತದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ, ಕೇಂದ್ರೀಯ ಆಂತರಿಕ ಭದ್ರತಾ ವ್ಯವಸ್ಥೆ, ಮುಂತಾದ ಸಂಸ್ಥೆಗಳ ಸಿಬ್ಬಂದಿ ಮತ್ತಿತರೆ ವಿಭಾಗಗಳಿಗೆ ವಸತಿ ಅವಶ್ಯಕತೆಗಳನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಸುರಕ್ಷಿತ ನಿಬಂಧನೆಗಳಿಗೆ ಒಳಪಡಿಸಿ ವಿಶೇಷ ವ್ಯವಸಾಯ ವಲಯದಲ್ಲಿ ಅಭಿವೃದ್ಧಿಗಾಗಿ ಅನುವು ಮಾಡಿಕೊಡಲಾಗಿದೆ. ಕೇಂದ್ರ ಸರ್ಕಾರ, ಕರ್ನಾಟಕ ಸರ್ಕಾರ ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ, ಇವುಗಳ ಮಧ್ಯೆ ನಡೆದಿರುವ ಒಪ್ಪಂದಗಳ ಪ್ರಕಾರ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ವಿಮೋಚನೆಗೊಳಪಡಿಸಿ ಸಾಮಾನ್ಯ ಸಾರಿಗೆ ವಲಯದಿಂದ ನಿಬಂಧನೆರಹಿತಗೊಳಿಸಲು ವಿಮಾನ ನಿಲ್ದಾಣ ಪ್ರದೇಶವನ್ನು ``ವಿಮಾನ ನಿಲ್ದಾಣ ವಲಯ`` ವೆಂದು ಘೋಷಿಸಲಾಗಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರನ್ವಯ ಮಹಾಯೋಜನೆಯನ್ನು ತಯಾರಿಸಿದ್ದು, ಅದರಂತೆ ಭೂ ಉಪಯೋಗ ವಲಯಗಳಲ್ಲಿ ವಿವಿಧ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವ ಸಂಬಂಧ, ಕಟ್ಟಡಗಳ ಸುತ್ತಮುತ್ತಲಿನ ನಡುಜಾಗಗಳು, ನಿವೇಶನ ಆವರಣ (Plot Coverage), ಅಂತಸ್ತಿನ ಅನುಪಾತ ಪ್ರದೇಶ (Floor Area Ratio), ಕಟ್ಟಡದ ಎತ್ತರ, ಕಟ್ಟಡ ರೇಖೆ (Building line), ವಾಹನ ನಿಲುಗಡೆ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಒಳಗೊಂಡಿರುವ ನೂತನ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದೆ.

ಮಹಾನಗರ ಆಯುಕ್ತರು, ಬಿಎಂಆರ್‌ಡಿಎ ಹಾಗೂ ಅಧ್ಯಕ್ಷರು, ಬಿಐಎಎಪಿಎ ಇವರು ಸಲ್ಲಿಸಿರುವ ಅಂತಿಮ ಮಹಾಯೋಜನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ :-

ಸರ್ಕಾರಿ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005

ಬೆಂಗಳೂರು. ದಿನಾಂಕ 27.01.2009

ಪ್ರಸ್ತಾವನೆಯಲ್ಲಿ ಹೇಳಿರುವ ಅಂಶಗಳನ್ನು ಸರ್ಕಾರವು ಪರಿಶೀಲಿಸಿ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ತಯಾರಿಸಿರುವ ಅಂತಿಮ ಮಹಾಯೋಜನೆ 2021ಕ್ಕೆ (ಮಾಸ್ಟರ್ ಪ್ಲ್ಯಾನ್) ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ಸೆಕ್ಷನ್ 13(3)ರನ್ವಯ ಸರ್ಕಾರ ಮಂಜೂರಾತಿ ನೀಡಿದೆ ಹಾಗೂ ಉದ್ದೇಶಿತ ಮಹಾಯೋಜನೆಗೆ ಭೂ ಉಪಯೋಗದ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:-

Description	Total Area Conurbation Area-2021 (Hectares)	% Total Proposed-2021
Residential	7,284.34	49.80%
Commercial	470.33	3.23%

Description	Total Area Conurbation Area-2021 (Hectares)	% Total Proposed-2021
Industrial	566.70	3.87%
Public & Semi Public	731.94	5.00%
Park & Open Space	1,841.89	12.59%
Airport Zone	1,743.98	11.92%
Transportation	1,982.61	13.55%
Public Utilities	5.84	0.04%
Total Area Proposed	14,627.63	100.0.0%
1. KIADB Area	1,706.84	
2. Special Agricultural Zone	1,800.52	
3. Water bodies	5,669.09	
4. Agriculture	55,395.92	
Grand Total Area	79,200.00	

2021ರ ಮಾಸ್ಟರ್ ಪ್ಲ್ಯಾನ್‌ಗೆ ಸಂಬಂಧಿಸಿದ ವರದಿ ಹಾಗೂ ಭೂ ಉಪಯೋಗ ಯೋಜನೆಯ ಎಲ್ಲಾ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆ ಹಾಗೂ ಸಹಿಯನ್ನು ಮಾಡಲಾಗಿದೆ.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಪ್ರೇಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

KA / BG - GPO/ 2515 /WPP-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – IV-A | ಬೆಂಗಳೂರು, ಗುರುವಾರ, ಜನವರಿ ೨೯, ೨೦೦೯ (ಮಾಘ ೯, ಶಕ ವರ್ಷ ೧೯೩೦) | ನಂ. ೪೮

ನಗರಾಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ನಅಇ 157 ಬಿಎಂಆರ್ 2005, ಬೆಂಗಳೂರು, ದಿನಾಂಕ: 29ನೇ ಜನವರಿ, 2009

ಸರ್ಕಾರಿ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005 ದಿನಾಂಕ: 27.01.2009ರ ಪ್ರಸ್ತಾವನೆಯ ಪುಟ 2ರ ಕ್ರಮಸಂಖ್ಯೆ: 3ರಲ್ಲಿನ ಆರನೇ ಪದವಾದ ''ಮೊದಲು'' ಎನ್ನುವ ಪದವನ್ನು ಕೈಬಿಟ್ಟು ಓದಿಕೊಳ್ಳತಕ್ಕದ್ದು.

ಮುಂದುವರಿದು, ಪುಟ ಸಂಖ್ಯೆ: 3ರ ಆದೇಶ ಭಾಗದ 1ನೇ ಸಾಲಿನ 5ನೇ ಪದದ ನಂತರ ''ಸಾರ್ವಜನಿಕರು / ಭೂಮಾಲೀಕರಿಂದ ಬಂದ ಆಕ್ಷೇಪಣೆಗಳು / ಮನವಿಗಳನ್ನು ಪರಿಶೀಲಿಸಿ ಮತ್ತು ಪರಿಗಣಿಸಿ ಈಗಾಗಲೇ ದಿನಾಂಕ: 13.09.2004 ಮತ್ತು ತಿದ್ದುಪಡಿ ಆದೇಶ ದಿನಾಂಕ: 17.09.2004ರಲ್ಲಿ ಅನುಮೋದಿಸಿರುವ ತಾತ್ಕಾಲಿಕ ಮಾಸ್ಟರ್ ಪ್ಲ್ಯಾನ್‌ನೊಂದಿಗೆ ಸರ್ಕಾರ ಕೆಐಎಡಿಬಿಯಿಂದ ಭೂಸ್ವಾಧೀನ ಪಡಿಸಿಕೊಂಡು ಅಭಿವೃದ್ಧಿಪಡಿಸುತ್ತಿರುವ ಜಮೀನಿನ ಭೂ ಉಪಯೋಗವನ್ನು ಮತ್ತು ತಾತ್ಕಾಲಿಕ ಮಾಸ್ಟರ್ ಪ್ಲ್ಯಾನ್ ಪ್ರಕಟಿಸುವವರೆಗೂ ಆಗಿರುವ ಎಲ್ಲಾ ಭೂ ಪರಿವರ್ತನೆಗಳನ್ನು ಸಂರಕ್ಷಿಸಿ'' ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಎಸ್. ಪ್ರೇಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು.